# ನಿರಂತರ ಓದು, ಬರಹವೇ ರ‍್ಯಾಂಕ್‌ಗೆ ದಾರಿ

**ಪಿಯುಸಿ ಪರೀಕ್ಷೆಯಲ್ಲಿ ಪ್ರಥಮ ರ‍್ಯಾಂಕ್ ಪಡೆದ ಕುಸುಮಾ ಅಧ್ಯಯನದ ಗುಟ್ಟು**

■ ಕೆ. ನರಸಿಂಹಮೂರ್ತಿ



ಅಪ್ಪನ ಪಂಕ್ಚರ್ ಶಾಪ್‌ನಲ್ಲಿ ಕುಸುಮಾ



ಕೊಟ್ಟೂರಿನ ಇಂದು ಕಾಲೇಜಿನ ಕುಸುಮಾ ಅವರಿಗೆ ಕಲಾ ವಿಭಾಗದಲ್ಲಿ ಮೊದಲ ರ‍್ಯಾಂಕ್ ಬರುವ ಬಗ್ಗೆ ಯಾವ ಅನುಮಾನವೂ ಇರಲಿಲ್ಲ. ಆದರೆ ಫಲಿತಾಂಶ ಪ್ರಕಟವಾಗುವವರೆಗೂ, ಆ ಬಗ್ಗೆ ಎಲ್ಲಿಯೂ ಆಕೆ ಮೌನ ಮುರಿದಿರಲಿಲ್ಲ.

ಫಲಿತಾಂಶ ಬಂದ ಬಳಿಕವಷ್ಟೇ ಆಕೆ, ಬಿಡುವಿನ ವೇಳೆಯಲ್ಲಿ ಅಪ್ಪನ ಪಂಕ್ಚರ್ ಶಾಪ್‌ನಲ್ಲಿ ಗಾಡಿಗಳಿಗೆ ಪಂಕ್ಚರ್ ಹಾಕುತ್ತಲೇ ಓದಿದ ಅಪರೂಪದ ವಿದ್ಯಾರ್ಥಿನಿ ಎಂಬುದು ಜಗತ್ತಿಗೆ ಗೊತ್ತಾಯಿತು.

ಕೊಟ್ಟೂರಿನ ವಾಲ್ಮೀಕಿ ನಗರದ ಮನೆಯಿಂದ ಸುಮಾರು ಒಂದು ಕಿ.ಮೀ. ದೂರದಲ್ಲಿ ಚಿರಿಬಿ ರಸ್ತೆಯಲ್ಲಿರುವ ಕಾಲೇಜಿಗೆ ಆಕೆ ಸಹಪಾಠಿಗಳೊಂದಿಗೆ ನಡೆದೇ ಹೋಗುತ್ತಿದ್ದರು. ವಾಪಸು ಬರುವಾಗಲೂ ನಡಿಗೆಯೇ ಜೊತೆಗಾರ.

ಎಂಟು ಮಂದಿ ವಾಸವಿರುವ 15X16 ಅಳತೆಯ ಚಿಕ್ಕ ಮನೆಯ ಐವರು ಮಕ್ಕಳ ಪೈಕಿ ಈಕೆ ಕೊನೆ ಮಗಳು. ಹಜಾರ, ಅಡುಗೆ ಕೋಣೆ ಮತ್ತು ಕಿರು ಕೊಠಡಿ ಹೊರತುಪಡಿಸಿದರೆ ಬೇರೆ ಜಾಗವೇ ಇಲ್ಲ. ಹೀಗಾಗಿ ಈಕೆಗೆ ಮನೆಯ ಮೇಲಿನ ಖಾಲಿ ಜಾಗವೇ ಅಧ್ಯಯನ ಕೇಂದ್ರವಾಗಿತ್ತು. ವಿಶೇಷ ಎಂದರೆ, ಮನೆಯ ಮೇಲಿನ ಜಾಗದಲ್ಲಿ ಬೀದಿ ದೀಪದ ಬೆಳಕು ಹರಡಿಕೊಳ್ಳುತ್ತಿದ್ದುದರಿಂದ ರಾತ್ರಿ 10ರವರೆಗೂ ಆಕೆ ನಿರಂತರವಾಗಿ ಓದಿಕೊಳ್ಳುತ್ತಿದ್ದರು.

ಬೆಳಿಗ್ಗೆ 5,30ಕ್ಕೆ ಏಳುವ ಕುಸುಮಾ ಎರಡು ಗಂಟೆ ಕಾಲ ಓದಿಕೊಂಡು, ಮನೆಗೆಲಸ ಮಾಡಿ ಕಾಲೇಜಿಗೆ ಹೋಗಲು ಸಿದ್ಧರಾಗುತ್ತಿದ್ದರು. 9.30ರಿಂದ ಸಂಜೆ 4.30ರವರೆಗೂ ಕಾಲೇಜು. ಅಲ್ಲಿಯೂ ಮಧ್ಯಾಹ್ನದ ಊಟದ ಬಿಡುವಿನ ಒಂದು ಗಂಟೆ ಕಾಲದ ಕೊಂಚ ಭಾಗವನ್ನು ಓದಿಗೆ ಮೀಸಲಿಡುತ್ತಿದ್ದರು.

ಸಂಜೆ ಮನೆಗೆ ಬಂದ ಬಳಿಕ ಉಪಾಹಾರ, ಟೀ ಸೇವಿಸಿದ ಬಳಿಕ ಮಾಡುತ್ತಿದ್ದ ಮೊದಲ ಕೆಲಸ, ಬೆಳಿಗ್ಗೆಯಿಂದ ಸಂಜೆವರೆಗೂ ಕಾಲೇಜಿನಲ್ಲಿ ನಡೆದ ಪಾಠದ ನೋಟ್ಸ್ ತಯಾರಿಸಿಟ್ಟುಕೊಳ್ಳುವುದು.

ಸಂಜೆ 7ಕ್ಕೆ ಮನೆಯ ಮೇಲೆ ಹೋಗಿ ಕುಳಿದರೆ ರಾತ್ರಿ10 ರವರೆಗೂ ಕದಲದೇ ಓದುತ್ತಿದ್ದರು. ಮನೆಯೊಳಕ್ಕೆ ಬಂದ ಬಳಿಕವೂ ಇಷ್ಟವಾದರೆ ಓದುತ್ತಾ ಕುಳಿತುಕೊಳ್ಳುವುದು ಹವ್ಯಾಸ.

‘ಇಂತಿಷ್ಟೇ ಗಂಟೆ ಕಾಲ ಓದಬೇಕು ಎಂಬ ಒತ್ತಡವನ್ನು ನಾನು ಎಂದಿಗೂ ಹೇರಿಕೊಳ್ಳಲಿಲ್ಲ. ಓದಬೇಕು ಎನ್ನಿಸಿದರೆ ಓದಿಕೊಳ್ಳುತ್ತಿದ್ದೆ. ಸಾಕೆನ್ನಿಸಿದರೆ ಪುಸ್ತಕ ಮುಚ್ಚಿಟ್ಟು ಮಲಗಿಕೊಳ್ಳುತ್ತಿದೆ. ಟಿ.ವಿಯಲ್ಲಿ ಸಿನಿಮಾ –ಹಾಡು ನೋಡಿ ಖುಷಿಪಡುತ್ತಿದ್ದೆ. ನಾವು ಹಾಗೆಯೇ ಓದಬೇಕು. ನಿರಾಳವಾಗಿ. ಒತ್ತಡವಿಲ್ಲದೆ, ಬೇಕಾದ ವಿಷಯವನ್ನು ಬೇಕಾದ ಸಮಯದಲ್ಲಿ. ಒಟ್ಟಾರೆ ಓದಬೇಕಷ್ಟೇ. ಖುಷಿಯಿಂದ’ ಎಂದು ಅವರು ಹೇಳುವಾಗ ತಾಯಿ ಜಯಮ್ಮ ಮಗಳ ಕಡೆಗೆ ಹೆಮ್ಮೆಯಿಂದ ನೋಡುತ್ತಿದ್ದರು.

‘ಬೇಸಿಗೆ ರಜೆಯಲ್ಲಿ, ವಾರದ ರಜೆಯ ದಿನಗಳಲ್ಲಿ ಹೀಗೆ ಯಾವಾಗ ಬಿಡುವಿದೆ ಎನ್ನಿಸುತ್ತಿತ್ತೋ, ಆಗೆಲ್ಲಾ ಅಪ್ಪನ ಅಂಗಡಿಗೆ ಹೋಗಿ ನಾನೂ

## ಕುಸುಮಾ ಟಿಪ್ಸ್

- ನಮ್ಮ ಮನೆಯ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು
- ಓದಲು ಕುಳಿತಾಗ ಮನೆಯ ಪರಿಸ್ಥಿತಿ ಎದುರಿಗೆ ಬರಬೇಕು
- ಸಿಲಬಸ್ ಅನ್ನು ಸಂಪೂರ್ಣವಾಗಿ ಓದಬೇಕು
- ಕನಿಷ್ಠ ಎಂಟು ಪ್ರಶ್ನೆಪತ್ರಿಕೆಗಳಿಗೆ ಉತ್ತರಿಸಬೇಕು
- ಪುನರಾವರ್ತನೆ ಮಾಡುವುದು ಕಡ್ಡಾಯ
- ‘ಅಂದಿನ ಪಾಠ–ಅಂದೇ ಓದು’ ಸೂತ್ರ ಅನುಸರಿಸಿ
- ಓದಿದರಷ್ಟೇ ಸಾಲದು, ನಿರಂತರ ಬರೆದು ಅಭ್ಯಾಸ ಮಾಡಬೇಕು.
- ಯಾವ ವಿಷಯವೇ ಆಗಲಿ, ಇಷ್ಟಪಟ್ಟು ಓದಿ, ಕಷ್ಟಪಡಬೇಡಿ